ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 383(646)

ಸದಸ್ಯರ ಹೆಸರು : ಶ್ರೀ ಗುರುಸ್ವಾಮಿ ಎ.ಎಸ್.(ಚಾಮುಂಡೇಶ್ವರಿ)

ಉತ್ತರಿಸುವ ಸಚಿವರು : ಶ್ರೀ ಆರ್.ವಿ. ದೇಶಪಾಂಡೆ(ಭಾರಿ ಮತ್ತು ಮಧ್ಯಮ ಕೈಗಾರಿಕೆ ಸಚಿವರು)

ಪ್ರಶ್ನೆ

ಅ. ಮೈಸೂರು ತಾಲ್ಲೂಕಿನಲ್ಲಿರುವ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳೆಷ್ಟು?

ಆ. ಕಳೆದ ಎರಡು ವರ್ಷದ ಅವಧಿಯಲ್ಲಿ ಮುಚ್ಚಿರುವ ಘಟಕಗಳೆಷ್ಟು?

ಇ. ಮುಚ್ಚಿರುವ ಘಟಕಗಳನ್ನು ತೆರೆಯಲು ಏನು ಕ್ರಮಕೈಗೊಳ್ಳಲಾಗಿದೆ.

ಉತ್ತರ

ಅ. ಮೈಸೂರು ತಾಲ್ಲೂಕಿನಲ್ಲಿ 77 ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಇರುತ್ತವೆ.

ಆ. ಕಳೆದ ಎರಡು ವರ್ಷಗಳಲ್ಲಿ 2 ಘಟಕಗಳು ಮುಚ್ಚಿರುತ್ತವೆ.

ಇ. ಘಟಕಗಳ ಪುನರಾರಂಭಕ್ಕೆ ಪ್ರಯತ್ನಿಸಲಾಗುತ್ತಿದೆ.

ಪರಿಶಿಷ್ಟ ವರ್ಗದ ತಾಂಡಾಗಳ ಅಭಿವೃದ್ಧಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 384(200)

ಸದಸ್ಯರ ಹೆಸರು : ಶ್ರೀ ಹನುಮೇಗೌಡ ಕೆ.ಹೆಚ್.(ಹಾಸನ)

ಸಚಿವರ ಹೆಸರು ಮತ್ತು ಪದನಾಮ : ಶ್ರೀ ಕಾಗೋಡು ತಿಮ್ಮಪ್ಪ(ಸಮಾಜ ಕಲ್ಯಾಣ ಸಚಿವರು)

ಪ್ರಶ್ನೆ

ಅ. ಕೇಂದ್ರ ಸರ್ಕಾರದ ಅನುದಾನದಿಂದ ಪರಿಶಿಷ್ಟ ವರ್ಗದ ತಾಂಡವನ್ನು ಅಭಿವೃದ್ಧಿಪಡಿಸುತ್ತಿರುವುದು ಸರಿಯಷ್ಟೆ ಆದರೆ ಹಾಸನ ವಿಧಾನಸಭಾ ಕ್ಷೇತ್ರ ತಾಂಡಾಗಳಾದ ಹಿರೇಗೌಡನಹಳ್ಳಿ ಹಾಗೂ ಜಾಗರವಳ್ಳಿ ಗ್ರಾಮಗಳಿಗೆ ಭೇಟಿ ನೀಡಿ, ಬೇಕಾಗುವ ಅಭಿವೃದ್ಧಿ ಕೆಲಸಗಳ ಪಟ್ಟಿ ಮಾಡಿ, ಅಂದಾಜು ತಯಾರಿಸಿ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳ ಮೂಲಕ ಸರ್ಕಾರಕ್ಕೆ ಸಲ್ಲಿಸುವಂತೆ ತಿಳಿಸಲಾಗಿದ್ದರೂ ಈ

ಅಧಿಕಾರಿಯವರು ಶಿಫಾರಸ್ಸು ಮಾಡದಿರಲು ಕಾರಣವೇನು?

ಆ. ಈ ವರ್ಷದಲ್ಲಿ ಹಾಸನ ಜಿಲ್ಲೆಗೆ ಪರಿಶಿಷ್ಟ ವರ್ಗದ ತಾಂಡಾದ ಅಭಿವೃದ್ಧಿಗೆ ಯಾವ ಯಾವ ಗ್ರಾಮಗಳನ್ನು ಆಯ್ಕೆ ಮಾಡಿದೆ ತಿಳಿಸಿ?

ಉತ್ತರ

ಅ. ಹಾಸನ ತಾಲ್ಲೂಕಿನ ಜಾಗರವಳ್ಳಿ, ಹಿರೇಗೌಡನಹಳ್ಳಿ ಹಾಗೂ ಅರಕಲಗೂಡು ತಾಲ್ಲೂಕಿನ ಕರಡಿ ಮಂಡಿ, ಅಲೂರು ತಾಲ್ಲೂಕಿನ ಹುಣಸೆ ಕದಗನಹಳ್ಳಿ, ಕಲ್ಲಕೆರೆ ಗ್ರಾಮಗಳ ಅಭಿವೃದ್ಧಿ ಕಾಮಗಾರಿಗಳ ಪ್ರಸ್ತಾವನೆಯನ್ನು ದಿ:6-8-01 ರಂದು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಹಾಸನ ಇವರಿಗೆ ಅನುಮೋದನೆಗಾಗಿ ಸಲ್ಲಿಸಲಾಗಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಜಿಲ್ಲೆಯ ಎಲ್ಲಾ ಪರಿಶಿಷ್ಟ ವರ್ಗದ ಕಾಲೋನಿಗಳ ಅಭಿವೃದ್ಧಿ ಕಾಮಗಾರಿಗಳ ಪಟ್ಟಿಯನ್ನು ಕ್ರೋಢೀಕರಿಸಿ ಸಲ್ಲಿಸಲು ಸೂಚಿಸಿರುವುದಾಗಿ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು ಹಾಸನ ಇವರು ವರದಿ ಮಾಡಿರುತ್ತಾರೆ. ಅದರಂತೆ ದಿ:6-12-01ರಂದು ಜಿಲ್ಲಾ ಪಂಚಾಯತ್ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದ್ದು, ಹಾಸನ ಜಿಲ್ಲಾ ಪಂಚಾಯತ್‌ನಿಂದ ಪ್ರಸ್ತಾವನೆಯು ಇನ್ನೂ ಬರಬೇಕಾಗಿದೆ.

ಆ. 2001-02ನೇ ಸಾಲಿನ ಜಿಲ್ಲಾ ಪಂಚಾಯತ್‌ನಿಂದ ಪ್ರಸ್ತಾವನೆ ಬಂದಿರುವುದಿಲ್ಲ.

ರಾಜ್ಯದಲ್ಲಿ ವಸತಿ ಶಾಲೆಗಳು.

ಚುಕ್ಕೆ ಗುರ್ತಿಲ್ಲದ ಪ್ರಶ್ನೆ ಸಂಖ್ಯೆ : 385(684)

ಸದಸ್ಯರ ಹೆಸರು : ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್(ಹುಬ್ಬಳ್ಳಿ)

ಸಚಿವರ ಹೆಸರು ಮತ್ತು ಪದನಾಮ : ಶ್ರೀ ಕಾಗೋಡು ತಿಮ್ಮಪ್ಪ(ಸಮಾಜ ಕಲ್ಯಾಣ ಸಚಿವರು)

ಪ್ರಶ್ನೆ

1) ರಾಜ್ಯದಲ್ಲಿ ಸರ್ಕಾರಿ, ಅರೆ ಸರ್ಕಾರಿ ವಸತಿ ಶಾಲೆಗಳ ಸಂಖ್ಯೆಗಳೆಷ್ಟು? (ಜಿಲ್ಲಾವಾರು ವಿವರ ನೀಡುವುದು)

2) ಮತ್ತೆ ಹೊಸದಾಗಿ ವಸತಿ ಶಾಲೆಗಳು ಪ್ರಸಕ್ತ ಸಾಲಿನಿಂದ ಪ್ರಾರಂಭ ಮಾಡುವ ವಿಚಾರ ಸರ್ಕಾರದ ಮುಂದಿದೆಯೇ?